ಶಿವಮೊಗ್ಗ ತಾಲ್ಲೂಕು ಸುಳೆಬೈಲು ಗ್ರಾಮದಲ್ಲಿ ನಿವೇಶನಗಳ ಹಂಚಿಕೆಯ ಬಗ್ಗೆ ಸಿ.ಒ.ಡಿ. ತನಿಖೆ

೩೫೧. ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಗೃಹ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಶಿವಮೊಗ್ಗ ತಾಲ್ಲೂಕು ಸುಳೇಬೈಲು ಗ್ರಾಮದಲ್ಲಿನ ನಿವೇಶನ ದುರ್ವ್ಯವಹಾರ ಹಾಗೂ ಸ್ಫೋಟಕ ಪರಿಸ್ಥಿತಿಯ ಬಗ್ಗೆ ಸಿ.ಒ.ಡಿ. ತನಿಖೆ ಮಾಡುವುದಾಗಿ ಭರವಸೆ ನೀಡಿದ್ದು ನಿಜವಲ್ಲವೆ ?

ಆ) ಸದರಿ ವಿಚಾರದಲ್ಲಿ ಸಿ.ಒ.ಡಿ. ತನ್ನ ವರದಿ ಸಲ್ಲಿಸಿದೆಯೇ ?

ಇ) ಹಾಗಿದ್ದಲ್ಲಿ ವರದಿಯ ತಾತ್ಪರ್ಯವೇನು ಹಾಗೂ ವರದಿಯ ಪ್ರತಿಯನ್ನು ಸದನಕ್ಕೆ ಒದಗಿಸಲು ಸಾಧ್ಯವೇ ?

ಈ) ನಿವೇಶನ ದುರ್ವ್ಯವಹಾರದ ವರದಿಯ ಆಧಾರದ ಮೇಲೆ ತಪ್ಪಿತಸ್ಥರ ವಿರುದ್ಧ ಸರ್ಕಾರವು ಕೈಗೊಳ್ಳುವ ಕ್ರಮವೇನು ?

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಗೃಹ ಸಚಿವರು).—

ಅ) ಹೌದು

ಆ) ಗುಪ್ತ ವಿಚಾರಣೆ ನಡೆಸಿ ವರದಿ ತರಿಸಲಾಗಿದೆ,

ಇ) ವರದಿಯಲ್ಲಿ ನಿವೇಶನಗಳ ಹಂಚಿಕೆ ಬಗ್ಗೆ ಲೋಪದೋಷಗಳಿವೆಯೆಂದು ಮೇಲ್ನೋಟಕ್ಕೆ ಸಾಬೀತಾಗಿದೆ. ವಿವರವಾದ ವಿಚಾರಣೆಯನ್ನು ನಡೆಸಬೇಕೆಂದು ಕಂದಾಯ ಇಲಾಖೆ ಮತ್ತು ಜಿಲ್ಲಾ ಪರಿಷತ್ತುಗಳಿಗೆ ತಿಳಿಸಲಾಗುವುದು. ಗುಪ್ತ ವರದಿಯ ಪ್ರತಿಯನ್ನು ಸದನದಲ್ಲಿ ಮಂಡಿಸುವ ಅಗತ್ಯವಿಲ್ಲ, ಕಾರಣ ಇದು ಇಲಾಖಾ ವರದಿಯಾಗಿರುತ್ತದೆ. ಆಯೋಗದ ವರದಿಯಲ್ಲ.

ಈ) ವಿವರವಾದ ವಿಚಾರಣೆ ಮುಗಿದ ಮೇಲೆ ತಪ್ಪಿತಸ್ಥರ ಮೇಲೆ ಫಿರ್ಯಾದಿ ಕೊಟ್ಟಲ್ಲಿ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು.

ಅಮಾನತ್ತಿರುವ ಪೋಲೀಸ್ ಅಧಿಕಾರಿಗಳ ಬಗ್ಗೆ

೧೭೫. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ಮೂರು ವರ್ಷಗಳಲ್ಲಿ ಭ್ರಷ್ಟಾಚಾರದ ಆಪಾದನೆಗೆ ಒಳಗಾಗಿ ಅಮಾನತ್ತಿನಲ್ಲಿಟ್ಟಿರುವ ಪೋಲೀಸ್ ಅಧಿಕಾರಿಗಳ ಸಂಖ್ಯೆ ಎಷ್ಟು ?

ಆ) ಅಮಾನತ್ತಿನಲ್ಲಿಟ್ಟ ಎಷ್ಟು ಪೋಲೀಸ್ ಅಧಿಕಾರಿಗಳ ಬಗ್ಗೆ ವಿಚಾರಣೆ ಮಾಡಲಾಗಿದೆ ಮತ್ತು ಸರ್ಕಾರವು ಏನು ಕ್ರಮ ತೆಗೆದುಕೊಂಡಿದೆ ?

ಇ) ಲಂಚದ ಆಪಾದನೆಗೆ ಒಳಗಾಗಿರುವ ಪುರುಷ ಅಧಿಕಾರಿಗಳ ಹಾಗೂ ಮಹಿಳಾ ಅಧಿಕಾರಿಗಳ ಸಂಖ್ಯೆ ಎಷ್ಟು ?